ದಿನಾಂಕಃ 05.12.2024

ಅಸಲು ದಾವಾ 219/2022 ಪಿ ಡಬ್ಲ್ಯೂ 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಹೆಚ್ ಎಲ್ ಎಸ್ ವಕೀಲರಿಂದ

1. ನನ್ನ ತಂದೆಯ ಹೆಸರು ಹೊಂಬಾಳಯ್ಯ ಬಿನ್ ಹೊಂಬಾಳಯ್ಯ.ನಮ್ಮ ತಂದೆಯ ಜೊತೆ ಹುಟ್ಟಿದ್ದವರು ನನ್ನ ತಂದೆಯೂ ಸೇರಿ 3 ಜನ, ಅವರ ಹೆಸರೆಂದರೆ ಆರುಬೆರಳಯ್ಯ ಮತ್ತು ಮರಿಯಯ್ಯ. ಮರಿಯಯ್ಯರವರನ್ನು ದಡಿಯ ಎಂದು ಕರೆಯುತ್ತಿದ್ದರು ಎಂದರೆ ಸಾಕ್ಷಿ ಹೌದು ಅದು ಪೇಟ್ ನೇಮ್ ಎಂದು ಉತ್ತರಿಸುತ್ತಾರೆ. ನನ್ನ ಅಜ್ಜಿಯಹೆಸರು ಹೊನ್ನಮ್ಮ ಎಂದರೆ ಸರಿ. ನನ್ನ ಅಜ್ಜಿಯ ಗಂಡನ ಹೆಸರು ಹೊಂಬಾಳಯ್ಯ ಎಂದರೆ ಸರಿ. ನನ್ನ ತಂದೆಗೆ ನಾವು ಇಬ್ಬರು ಮಕ್ಕಳು , ನಾನು ಮತ್ತು ನನ್ನ ಅಕ್ಕ ಇಂದ್ರಮ್ಮ. ಇನ್ನೊಬ್ಬರು ನಾಗರಾಜು ಸಹ ನಿಮ್ಮ ಸಹೋದರ ಎಂದರೆ ಸಾಕ್ಷಿ ಅವರು 20 ವರ್ಷಗಳ ಹಿಂದೆಯೇ ತೀರಿಕೊಂಡರು ಎಂದು ಉತ್ತರಿಸುತ್ತಾರೆ. ಈ ರೀತಿ ನಿಮ್ಮ ಕುಟುಂಬದ ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ವಿನೋದ ರವರ ತಂದೆಯ ಹೆಸರು ಹೊಂಬಾಳಯ್ಯ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಮಂಚಯ್ಯ ಮರಿಲಿಂಗಮ್ಮ ಮರಿಲಿಂಗಮ್ಮ ನನ್ನ ದೊಡ್ಡಪ್ಪ ಮತ್ತು ದೊಡ್ಡಮ್ಮ. ಅವರಿಗೆ ಮೂರು ಜನ ಮಕ್ಕಳು. ಅವರೆಂದರೆ ಜಯಮ್ಮ, ಕೃಷ್ಣ ಮತ್ತು ಅಪ್ಪಾಜಿ. ಅವರಲ್ಲಿ ವಿನೋದರವರ ಗಂಡ ಅಪ್ಪಾಜಿಯವರು ತೀರಿಕೊಂಡಿರುತ್ತಾರೆ. ಮಂಚಯ್ಯ ಮರಿಲಿಂಗಮ್ಮನವರಿಗೆ ಒಟ್ಟು ಐದು ಜನ ಮಕ್ಕಳು , ಜಯಮ್ಮ, ಕೃಷ್ಣ, ರತ್ನಮ್ಮ, ಹೊಂಬಳಮ್ಮ ಮತ್ತು ಸರೋಜಮ್ಮ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ , ನನಗೆ ಗೊತ್ತಿರುವುದು ಮೂರು ಜನ ಮಕ್ಕಳುಎಂದು ಮಾತ್ರ ಎಂದು ಉತ್ತರಿಸುತ್ತಾರೆ. ಈ ಪ್ರಕರಣದ 1 ನೇ ಪ್ರತಿವಾದಿ ಮರಿಲಿಂಗಮ್ಮ ನನ್ನ ದೊಡ್ಡಮ್ಮ ಎಂದರೆ ಸರಿ. ವಿನೋದ ರವರು ಹೊಂಬಾಳಯ್ಯನವರ ಮಗಳು ಎಂದರೆ ಸಾಕ್ಷಿ ಅಲ್ಲ ಎಂದು ಉತ್ತರಿಸುತ್ತಾರೆ. ನೀವು ಸಲ್ಲಿಸಿರುವ ವಂಶವೃಕ್ಷದಲ್ಲಿ ಹೇಳಿರುವುದಕ್ಕೂ ಮತ್ತು 1 ನೇ ಪ್ರತಿವಾದಿಯ ಕುಟುಂಬಕ್ಕೂ ಸಂಬಂದವೇ ಇಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ.

2. ನಿಮ್ಮ ಮೇಲೆ ಒಂದು ರೇಪ್ ಪ್ರಕರಣ ಇತ್ತು ಎಂದರೆ ಸಾಕ್ಷಿ ಹೌದು ಅದು ಮುಕ್ತಾಯವಾಗಿದೆ ಎಂದು ಉತ್ತರಿಸುತ್ತಾರೆ. ನೀವು ಇದೇ ರೀತಿ ಕೃಷ್ಣ ರವರ ಮಗಳು ಕವನ ರವರಿಗೆ ಭೂ ಸ್ವಾಧೀನ ಪರಿಹಾರ ಪ್ರಕರಣದಲ್ಲಿ ಬಂದ ಪರಿಹಾರದ ಹಣದಲ್ಲಿ ನನಗೂ ಹಣ ಬರಬೇಕುಎಂದು ಹಣ ವಸೂಲಿ ಮಾಡಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನಿಮ್ಮ ದೊಡ್ಡಮ್ಮ ಮರಿಲಿಂಗಮ್ಮ ಮತ್ತು 2 ನೇ ಪ್ರತಿವಾದಿ ವಿನೋದರವರ ಸಹಿಯನ್ನು ಫೋರ್ಜರಿ ಮಾಡಿ ರೂ. 9 ಲಕ್ಷ ಚಿಲ್ಲರೆ ಹಣ ಡ್ರಾ ಮಾಡಿದ್ದೀರಿ ಮತ್ತು ಅವರಿಬ್ಬರ ಸಹಿಯನ್ನುಪಡೆದು ಹಣ ತಂದು ಕೊಡುವುದಾಗಿ ಹೇಳಿ ರೂ. 8 ಲಕ್ಷಗಳನ್ನು ನೀವೇ ಡ್ರಾ ಮಾಡಿಕೊಂಡಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ.

3. ನಿಪಿಃ 16 ಮತ್ತು 17 ರಂತೆ ಅವಾರ್ಡ್ ನೋಟೀಸ್ ನಿಮ್ಮ ಹೆಸರಿಗೆ ಬಂದಿತ್ತಾ ಎಂದರೆ ಸಾಕ್ಷಿ ನನ್ನ ತಂದೆಯ ಹೆಸರಿಗೆ ಬಂದಿತ್ತು ಎಂದು ಉತ್ತರಿಸುತ್ತಾರೆ. ನಿಪಿಃ 16 ರಲ್ಲಿ ನಿಮ್ಮ ತಂದೆಯ ಹೆಸರು ನಮೂದು ಇದೆಯಾ ಎಂದರೆ ಹೌದು ಹೊಂಬಾಳಯ್ಯ ಬಿನ್ ಹೊಂಬಾಳಯ್ಯ ಎಂದು ನಮೂದು ಇದೆ ಎಂದು ಉತ್ತರಿಸುತ್ತಾರೆ. ನಿಪಿಃ 16 ಮತ್ತು 17 ನಿಮಗೆ ಸಂಬಂದಪಟ್ಟಿದ್ದು ಅಲ್ಲ ನಿಮ್ಮ ತಂದೆ ಹಾಗೂ ತಾತನ ಹೆಸರು ಮತ್ತು 1 ನೇ ಪ್ರತಿವಾದಿಯ ಗಂಡನ ಹೆಸರು ಹೊಂಬಾಳಯ್ಯ ಎಂದು ಇರುವುದನ್ನು ದುರುಪಯೋಗ ಪಡಿಸಿಕೊಂಡು ನನ್ನ ತಂದೆಯ ಹೆಸರಿಗೆ ಬಂದಿದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ಸರ್ವೆ ನಂಬರ್ 98/3 ಮತ್ತು 98/4, ರೀ ಸರ್ವೆ ನಂಬರ್ 200/1 ಮತ್ತು 200/2 ಜಮೀನುಗಳು ನಿಮ್ಮ ಕುಟುಂಬಕ್ಕೆ ಸೇರಿಯೇ ಇಲ್ಲ ಆದರೂ ಅನ್ಯ ಸಂಪಾದನೆ ಮಾಡುವ ಉದ್ದೇಶದಿಂದ ಸುಳ್ಳು ದಾವೆ ಹೂಡಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ, ನಮ್ಮ ಜಮೀನುಗಳುಎಂದು ಉತ್ತರಿಸುತ್ತಾರೆ. ನಿಮಗೆ ಆ ಸ್ವತ್ತುಗಳಲ್ಲಿ ಹಕ್ಕು ಇದ್ದಲ್ಲಿ ಮಂಡ್ಯದಲ್ಲಿ ನಡೆದ ಎಲ್ ಎ ಸಿ ಪ್ರಕರಣದಲ್ಲಿ ನೀವು ಸೇರಿಕೊಳ್ಳಲು ಅರ್ಜಿ ಹಾಕುತ್ತಿದ್ದೀರಿ ಎಂದರೆ ಸಾಕ್ಷಿ ನಾವು ನಮ್ಮ ತಂದ ತೀರಿಕೊಂಡಿದ್ದರಿಂದ ಅವರ ಜೊತೆಯಲ್ಲಿಯೇ ಕೇಸ್ ನಡೆಸುತ್ತಿದ್ದೆವು ಎಂದು ಉತ್ತರಿಸುತ್ತಾರೆ. ಈ ಹಿಂದಿನ ಪಾಟೀ ಸವಾಲಿನಲ್ಲಿ ನೀವು ಸರ್ವೆ ನಂಬರ್ 98/3 ಮತ್ತು 98/4 ಜಮೀನನ್ನು ಹೊರತು ಪಡಿಸಿ ಉಳಿದೆರಡು ಜಮೀನುಗಳಲ್ಲಿ ಭಾಗ

ಮಾಡಿಕೊಂಡಿರುವುದಾಗಿ ಹೇಳಿದ್ದೀರಿ ಅದನ್ನು ತೋರಿಸಲು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸಾಕ್ಷಿ ಆ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಡುವ ಅವಶ್ಯಕತೆ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಊರಿನಲ್ಲಿ ಈ ರೀತಿ ಭೂ ಪರಿಹಾರದ ಹಣ ಬಂದಿದೆ, ಅವರೆಲ್ಲರಿಗೂ ಇದೇ ರೀತಿ ಮೋಸ ಮಾಡಿಕೊಂಡುಬಂದಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಈ ಮೇಲೆ ಹೇಳಿದ 2 ಆಸ್ತಿಗಳಲ್ಲಿ ನಿಮಗೆ ಯಾವುದೇ ಹಕ್ಕು ಇಲ್ಲ ಮತ್ತು ಆ ಜಮೀನಿನ ಬಾಬ್ತು ಬಂದಿರುವ ಭೂ ಪರಿಹಾರದ ಹಣದಲ್ಲಿಯೂ ನಿಮಗೆಯಾವುದೇ ಹಕ್ಕು ಇಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನಿಮ್ಮ ವಂಶವೃಕ್ಷದಲ್ಲಿ ಹೊಂಬಾಳಯ್ಯ ಎಂದುನಮೂದು ಇರುವುದರಿಂದ ಮತ್ತು ಪ್ರತಿವಾದಿಯವರ ವಂಶ ವೃಕ್ಷದಲ್ಲಿ ಹೊಂಬಾಳಯ್ಯ ಎಂದು ನಮೂದು ಇರುವುದರ ದುರುಪಯೋಗ ಪಡಿಸಿಕೊಂಡು ನೀವು ಅಕ್ರಮವಾಗಿ ಹಣ ಕಬಳಿಸಬೇಕೆಂಬ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಸುಳ್ಳು ದಾಖಲಾತಿಗಳನ್ನು ಕೊಟ್ಟು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಂ.ಎ.ಸಿ.ಟಿ

ಮದ್ದೂರು.